**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.**

**CC. 1061/2022** **CW.2 PW.3**

**ಹೆಸರು** ಃ ಕೆ. ಟಿ. ಹರೀಶ

ತಂದೆಯ – **ಹೆಸರು** ಃ ತಿಮ್ಮಯ್ಯ

**ವಯಸ್ಸು** ಃ **40** ವರ್ಷ

**ವೃತ್ತಿ** : ಚಾಲಕ

**ವಾಸ ಸ್ಥಳ** ಃ ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.

**ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕ ಃ 03-11-2025.**

ಮುಖ್ಯವಿಚಾರಣೆಃ- ಸ.ಸ.ಅ ರವರಿಂದಃ-

ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಬಕಾರಿ ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಅಥವಾ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಗಾಂಜಾ, ಕಾಂಡಾ ಹಾಗೂ ಬೀಜವನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಶೋಧನಾ ವಾರೆಂಟ್ ನ ಮೇಲೆ ಇದ್ದು, ಶೋಧನಾ ವಾರೆಂಟ್ ನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಮಾಲು ಪಟ್ಟಿಯ ಮೇಲೆ ಇದ್ದು, ಮಾಲು ಪಟ್ಟಿಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಾದರಿ ಸೀಲ್ ನ ಚೀಟಿಯ ಮೇಲೆ ಇದ್ದು, ಮಾದರಿ ಸೀಲ್ ನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಮಹಜರ್ ನ ಮೇಲೆ ಇದ್ದು, ಮಹಜರ್ ನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ನಿಪಿ.1 ರಿಂದ 4 ಕ್ಕೆ ನಾನು ಈಗ್ಗೆ ಒಂದೂವರೆ - ಎರಡು ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ನಾಗಮಂಗಲ ಟೌನ್ ಟಿ. ಬಿ. ವೃತ್ತದ ಬಳಿ ಸಹಿ ಮಾಡಿರುತ್ತೇನೆ. ನಿಪಿ.1 ರಿಂದ 4 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ನಿಪಿ.1 ರಿಂದ 4 ಕ್ಕೆ ಸಹಿ ಮಾಡುವಾಗ ನನ್ನ ಜೊತೆ ಬೇರೆ ಯಾರು ಇರಲಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಃ ಮಾನ್ಯ ಸಂಸಂಅ ಇವರಿಂದಃ-</u>**

ದಿನಾಂಕಃ 31-05-2022 ರಂದು ಸಂಜೆ 05 – 10 ಗಂಟೆಯ ಸಮಯದಲ್ಲಿ ನಾನು ಟಿ. ಬಿ. ಬಡಾವಣೆಯಲ್ಲಿರುವ ಆಟೋ ನಿಲ್ದಾಣದ ಬಳಿ ಇದ್ದಾಗ ಪ್ರಾಸಾ.1 ರವರು ನನ್ನನ್ನು ಕರೆದು ನನ್ನ ಹೆಸರು ವಿಳಾಸ ಕೇಳಿದ್ದು ನಾನು ಮೊದಲು ಗಾಬರಿಗೊಂಡು ನಂತರದಲ್ಲಿ ಅವರಿಗೆ ನನ್ನ ಹೆಸರು ವಿಳಾಸ ತಿಳಿಸಿದೆನು ಎಂದರೆ ಸರಿಯಲ್ಲ. ಅವರು ನನ್ನನ್ನು ವಿಚಾರಿಸಿದಾಗ ನಾನು

ತುರುವೆಕೆರೆಯಿಂದ ಬಂದಿದ್ದು ನಾಗಮಂಗಲ ಟಿ. ಬಿ. ಬಡಾವಣೆಯ ಸುಭಾಷ್ ನಗರದಲ್ಲಿರುವ ಆರೋಪಿಯು ತಮ್ಮ ಮನೆಯಲ್ಲಿ ಗಾಂಜಾ ಕೊಡುತ್ತಾರೆ ನಾನು ಅದನ್ನು ಖರೀದಿ ಮಾಡಲು ಬಂದಿರುತ್ತೇನೆ ಎಂದು ಹೇಳಿದೆನು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಪ್ರಾಸಾ.1 ರವರು ಸಂಜೆ 05 – 20 ಗಂಟೆಯ ಸಮಯದಲ್ಲಿ ನನ್ನನ್ನು ಕರೆದುಕೊಂಡು ಇತರೆ ಅಧಿಕಾರಿಗಳ ಜೊತೆ ಸಂಜೆ 05 – 30 ಗಂಟೆಗೆ ಆರೋಪಿಯ ಮನೆಯ ಬಳಿ ಹೋದೆವು ಎಂದರೆ ಸರಿಯಲ್ಲ. ಮನೆಯ ಮುಂದೆ ಬಾಗಿಲಿನಲ್ಲಿ ಒಬ್ಬ ಮಹಿಳೆ ಕುಳಿತಿದ್ದು ನಾನು ಆಕೆ ಗಾಂಜಾ ಕೊಡುವವಳು ಎಂದು ಹೇಳಿದೆನು ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ಸದರಿ ವ್ಯಕ್ತಿಗೆ ಮಾಹಿತಿಯನ್ನು ತಿಳಿಸಿ ಮನೆಯನ್ನು ಪರಿಶೀಲಿಸಬೇಕು ಎಂದು ತಿಳಿಸಿ ಅಲ್ಲಿದ್ದ ಕೆಲವರನ್ನು ಪಂಚರನ್ನಾಗಿ ಸಹಕರಿಸುವಂತೆ ಕೋರಲಾಗಿ ಅವರು ಯಾರೂ ಮುಂದೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಕಾರಣ ಅಧಿಕಾರಿಗಳು ನನ್ನನ್ನು ಹಾಗೂ ಇತರೆ ಅಧಿಾರಿಗಳನ್ನು ಪಂಚರನ್ನಾಗಿ ಮಾಡಿ ಈಗ ಓದಿ ಹೇಳಲಾದ ನಿಪಿ.1 ರಂತೆ ಶೋಧನಾ ವಾರೆಂಟ್ ನ್ನು ತಯಾರು ಮಾಡಿ ಅದಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಂತರ ನಾವು ಹಾಗೂ ಅಧಿಕಾರಿಗಳು ಮನೆಯ ಒಳಗೆ ಪ್ರವೇಶಿಸಿ ನೊಡಲಾಗಿ ಅಲ್ಲಿ ಒಂದು ಕೊಠಡಿ ಇದ್ದು ಬಾಗಿಲ ಬಲಭಾಗಕ್ಕೆ ಕಬ್ಬಿಣದ ಮಂಚ ಇತ್ತು ಎಂದರೆ ಸರಿಯಲ್ಲ. ಅದರ ಮೇಲೆ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ ಕವರ್ ಇದ್ದು ಅದರಲ್ಲಿ ಏನೋ ತುಂಬಿರುವುದು ಕಂಡು ಬಂದಿತು ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಲಾಗಿ ಅದರಲ್ಲಿ 3 ಬಿಳಿ ಕವರ್ ಪ್ಯಾಕ್ ಮಾಡಿದ ಗಾಂಜಾ ಪ್ಯಾಕೇಟ್ ಗಳು ಹಾಗೂ ಅದೇ ಕಪ್ಪು ಕವರ್ ನಲ್ಲಿ ಬಿಡಿಯಾಗಿದ್ದಂತಹ ಎಲೆ ಹಾಗೂ ಕಾಂಡ ಮಿಶ್ರಿತ ಎಲೆ ಹಾಗೂ ಗಾಂಜಾ ಬೀಜ ಕಂಡು ಬಂದವು ಮತ್ತು ಘಾಟು ವಾಸನೆಯಿಂದ ಕೂಡಿತ್ತು ಮತ್ತು ವಾಸನೆಯಿಂದ ಅದು ಗಾಂಜಾ ಎಂದು ಖಚಿತವಾಯಿತು ಎಂದರೆ ಸರಿಯಲ್ಲ. ನಂತರ ಸದರಿ ವಿಚಾರವಾಗಿ ಸದರಿ ಮಹಿಳೆಯನ್ನು ವಿಚಾರಿಸಲಾಗಿ ಅದನ್ನು ಮಾರಾಟ ಮಾಡಲು ಇಟ್ಟುಕೊಂಡಿದ್ದೀನಿ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಗಾಂಜಾ ಸೊಪ್ಪನ್ನು

ಎಲೆಕ್ಟ್ರಾನಿಕ್ ವೇಯಿಂಗ್ ಮಿಶಿನ್ ನಿಂದ ತೂಕ ಮಾಡಿ ನೋಡಲಾಗಿ ಅದು 95 ಗ್ರಾಂ ಇತ್ತು ಎಂದರೆ ಸರಿಯಲ್ಲ. ಅದನ್ನು ಹೊರತು ಪಡಿಸಿ ಬೇರೆ ಗಾಂಜಾ ಪತ್ತೆ ಆಗಿರಲಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಂತರ ಪ್ರಾಸಾ.1 ರವರು ಅದನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಮೊಹರು ಮಾಡಲಾಯಿತು ಎಂದರೆ ಸರಿಯಲ್ಲ. ನಂತರ ನಿಪಿ.3 ರಂತೆ ಮಾದರಿ ಸೀಲ್‌ವುಳ್ಳ ಚೀಟಿಯನ್ನು ತಯಾರಿಸಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಮಹಿಳೆಯ ಹೆಸರು ವಿಳಾಸ ಕೇಳಲಾಗಿ ಆಕೆಯ ಹೆಸರು ಹುಸೇನ್‌ಬಿ ಎಂದು ತಿಳಿಸಿರುತ್ತಾರೆ ಎಂದದರೆ ಸರಿಯಲ್ಲ. ನಂತರ ಅಧಿಕಾರಿಗಳು ಆರೋಪಿಯನ್ನು ಕರೆದುಕೊಂಡು ಹಾಗೂ ವಶಪಡಿಸಿಕೊಂಡ ಗಾಂಜಾವನ್ನು ಕಛೇರಿಗೆ ತೆಗೆದುಕೊಂಡು ಹೋಗಿ ಆರೋಪಿಯ ವಿರುದ್ಧ ಪ್ರಕರಣ ದಾಖಲಾದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಅಬಕಾರಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಈ ಓದಿ ಹೇಳಲಾದ ನಿಪಿ.11 ರಂತೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾಳಿಯಲ್ಲಿ ಭಾಗ ವಹಿಸಿ ಈ ಪ್ರಕರಣದ ಎಲ್ಲಾ ಮಾಹಿತಿಗಳು ಇದ್ದು ನಿಪಿ.1 ರಿಂದ 4 ಹಾಗೂ 11 ರಲ್ಲಿ ಇರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಡಿ. ಆರ್. ಎಂ. ವಕೀಲರಿಂದ ಇಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ
ನ್ಯಾಯಾಲಯ, ನಾಗಮಂಗಲ.